ಈ ದಿನ ದಿನಾಂಕಃ 10.11.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ</u>**

ಸಾಕ್ಷಿಗೆ ಒಂದು ಬಾವಚಿತ್ರವನ್ನು ತೋರಿಸಿದಾಗ ನೋಡಿ ಸದರಿ ಮನೆ ಶೆಡ್ ನ್ನು ನಾನೇ ಹಾಕಿರುತ್ತೇನೆಂದು ಗುರುತಿಸಿದ್ದರಿಂದ **<u>ನಿಡಿ 1</u>** ಎಂದು ಗುರುತಿಸಲಾಯಿತು. ಸದರಿ ಬಾವಚಿತ್ರದಲ್ಲಿ ಕಾಣುತ್ತಿರುವ ಮಹಿಳೆ ಪ್ರಸ್ತುತ ದಾವೆಯ ಪ್ರತಿವಾದಿಗಳು. 1989 ರಲ್ಲಿ ಪಂಚಾಯಿತಿಯಿಂದ ನಾನು ಖರೀದಿಸಿದ ಆಸ್ತಿಯ ಹಕ್ಕು ಪತ್ರವನ್ನು ನಮಗೆ ಮಾರಾಟ ಮಾಡಿದ ಬಸವರಾಜಪ್ಪ ಪಡೆದಿರುತ್ತಾರೆ. ನಿಪಿ 3 ರಲ್ಲಿರುವ ಹಕ್ಕುಪತ್ರದಲ್ಲಿನ ಷರತ್ತುಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಾನು ಆಸ್ತಿ ಖರೀದಿ ಮಾಡುವ ಕಾಲಕ್ಕೆ ನಿಪಿ 3 ರಲ್ಲಿ ನಮೂದಿಸಿರುವಂತೆ ನಿವೇಶನ ಪಡೆದವರು ಪಡೆದ ದಿನಾಂಕದಿಂದ 25 ವರ್ಷಗಳವರೆಗೆ ಪರಭಾರೆ ಮಾಡುವಂತಿಲ್ಲ ಎಂದು ನಮೂದಿಸಿರುತ್ತಾರೆ ಎಂದರೆ ಸರಿ.

2. ದಾವಾ ಚೆಕ್ಕುಬಂದಿಗೂ ನಿಪಿ 3 ರಲ್ಲಿನ ಚೆಕ್ಕುಬಂದಿಗೆ ವ್ಯತ್ಯಾಸ ಇದೆ ಎಂದರೆ ಸರಿ. ಬಸವರಾಜಪ್ಪ ಹಕ್ಕುಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿ ಒಳಗೆ ಮನೆ ಅಥವಾ ಕಟ್ಟಡವನ್ನು ನಿರ್ಮಾಣ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ 3 ರಲ್ಲಿ ನಿವೇಶನ ಪಡೆದ 2 ವರ್ಷಗಳ ಒಳಗೆ ನಿವೇಶನದಲ್ಲಿ ಗುಡಿಸಲು ಅಥವಾ ಮನೆಯನ್ನಾಗಲೀ ಕಟ್ಟಬೇಕೆಂದು ಷರತ್ತು ಹಾಕಿರುತ್ತಾರೆ ಎಂದರೆ ಸರಿ. ಆಸ್ತಿ ಖರಿದೀಸುವ ಕಾಲಕ್ಕೆ ನಿಪಿ 3 ರಲ್ಲಿ ನಮೂದಿಸಿರುವ ಷರತ್ತುಗಳನ್ನು ನಾನು ಓದಿ ತಿಳಿದುಕೊಂಡು ಖರೀದಿಸಿರುತ್ತೇನೆ ಎಂದರೆ ಸಾಕ್ಷಿಯು ತಿಳಿದುಕೊಂಡು ಖರೀದಿಸಿರುತ್ತೇನೆಂದು ನುಡಿಯುತ್ತಾರೆ. ಹಾಗಾಗಿ ಮಾರಾಟಗಾರ ಬಸವರಾಜಪ್ಪ ಹಾಗೂ ನನಗೂ ಸದರಿ ಆಸ್ತಿಯನ್ನು ಮಾರಾಟ ಅಥವಾ ಖರೀದಿಸುವ ಯಾವುದೇ ಹಕ್ಕು ಆ ಕಾಲಕ್ಕೆ ಲಭ್ಯ ಆಗಿರಲಿಲ್ಲ ಎಂದರೆ ಸರಿಯಲ್ಲ.

3. ಸುಮಾರು 15 ವರ್ಷಗಳಿಂದ ನಿಡಿ 1 ರಲ್ಲಿ ಕಾಣುವ ಶೆಡ್ ನ್ನು ನಾನು ನಿರ್ಮಿಸಿರುತ್ತೇನೆ. ಶೆಡ್ ನ್ನು ನಿರ್ಮಾಣ ಮಾಡಲು ಪಂಚಾಯಿತಿಯಿಂದ ನಾನು ಪರವಾನಿಗೆಯನ್ನು ಪಡೆದಿರುತ್ತೇನೆ.

ಗ್ರಾಮ ಪಂಚಾಯಿತಿಯಿಂದ ಆಸ್ತಿಯಲ್ಲಿ ಶೆಡ್ ನಿರ್ಮಾಣ ಮಾಡುವ ಪೂರ್ವದಲ್ಲಿ ಪರವಾನಿಗೆಯನ್ನು ಪಡೆದಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಿಪಿ 3 ರಲ್ಲಿ ನಮೂದಾಗಿರುವ ಆಸ್ತಿಯ ಒಟ್ಟು ವಿಸ್ತೀರ್ಣದಲ್ಲಿ 15x20 ವಿಸ್ತೀರ್ಣದ ಶೆಡ್ ನ್ನು ಪೂರ್ವ ಭಾಗಕ್ಕೆ ಹಾಕಲು ಪರವಾನಿಗೆ ಪಡೆದಿರುತ್ತೇನೆ. ಸದರಿ ವಿಚಾರವನ್ನು ವಕೀಲರ ಮೂಲಕ ವಾದ ಪತ್ರದಲ್ಲಿ ಹೇಳಿ ಬರೆಯಿಸಿರುತ್ತೇನೆ.

4. ದಾವಾ ಆಸ್ತಿ ಪೂರ್ವ ಭಾಗಕ್ಕೆ ಖಾಲಿ ಎಂದು ನಮೂದಾಗಿದ್ದು ನಿಪಿ 3 ರಲ್ಲಿ ನಿವೇಶನ ಸಂ. 17 ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ನಾವು ಖರೀದಿಸಿದಾಗ ಖಾಲಿ ಇದ್ದು ಈಗ ಶೆಡ್ ನ್ನು ಹಾಕಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ 3 ರಲ್ಲಿ ನಮೂದಿಸಿರುವ ಪೂರ್ವದ ಚೆಕ್ಕುಬಂದಿ ನಿವೇಶನ ಸಂ. 17 ಸರಿಯಾಗಿರುತ್ತದೆ. ನಿಪಿ 4 ರಲ್ಲಿ ಪೂರ್ವದ ಚೆಕ್ಕುಬಂದಿ ನಿವೇಶನ ಸಂ.17 ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ. ನಿಪಿ 4 ರ ದಕ್ಷಿಣದ ಚೆಕ್ಕುಬಂದಿ ರಸ್ತೆ ಎಂದು ನಮೂದಾಗಿದ್ದು ನಿಪಿ 3 ರಲ್ಲಿ ದಕ್ಷಿಣದ ಚೆಕ್ಕುಬಂದಿ ಕನ್ಸರ್ವೆನ್ಸಿ ರಸ್ತೆ ಎಂದು ನಮೂದಾಗಿರುತ್ತದೆ ಎಂದರೆ ಪಂಚಾಯಿತಿಯಿಂದ ಮಾಡಿದ ರಸ್ತೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ನಿಪಿ 3 ರಲ್ಲಿ ಪಂಚಾಯಿತಿ ದಾರಿ ಎಂದು ನಮೂದಾಗಿದ್ದು ನಿಪಿ 4 ರಲ್ಲಿ ರಸ್ತೆ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಎರಡು ಒಂದೇ ಎಂದು ನುಡಿಯುತ್ತಾರೆ.

5. ಪ್ರತಿವಾದಿಗಳು ನಿಡಿ 1 ರಲ್ಲಿ ಕಾಣುವ ಶೆಡ್ ನ್ನು ತೆರವು ಗೊಳಿಸದ ಕಾರಣ ಪ್ರಸ್ತುತ ದಾವೆಯನ್ನು ನಾನು ಸಲ್ಲಿಸಿರುತ್ತೇನೆ. ಸದರಿ ವಿಚಾರವನ್ನು ನಾನು ವಕೀಲರ ಮೂಲಕ ವಾದ ಪತ್ರದಲ್ಲಿ ನಮೂದಿಸಿರುತ್ತೇನೆ. ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗೆ ಶೆಡ್ ನ್ನು ಖಾಲಿ ಮಾಡಿಕೊಡುವಂತೆ ನೋಟಿಸ್ ನ್ನು ಕಳುಹಿಸಿರುವುದಿಲ್ಲ. ಪ್ರತಿವಾದಿಗಳು ಸಲ್ಲಿಸಿರುವ ತಕರಾರನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

6. ಕಲಿವೀರಪ್ಪ ಶಿವಕುಳೆನೂರು ಗ್ರಾಮದವರು. ಅವರು ಹುಟ್ಟಿದಾಗಿನಿಂದಲೂ ಅದೇ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಅಬ್ಬಿಗೆರೆ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಗ್ರಾಮದಲ್ಲಿ ನಮಗೂ ಪ್ರತಿವಾದಿಗಳಿಗೂ ಪಂಚಾಯಿತಿ

ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಆಸ್ತಿ ಗ್ರಾಮ ಠಾಣಾ ವ್ಯಾಪ್ತಿಗೆ ಬರುವುದಿಲ್ಲ ಸರ್ವೆ ನಂಬರ್ ನಲ್ಲಿ ಇರುವುದರಿಂದ ಯಾವುದೇ ರಾಜಿ ಪಂಚಾಯಿತಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ 1 ರಲ್ಲಿ ಕಾಣುವ ನೀಲಗಿರಿ ಮರಗಳನ್ನು ನಾವು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ಕಾಣುವ ನೀಲಗಿರಿ ಮರದ ವಯಸ್ಸು ಸುಮಾರು 30 ವರ್ಷ ಎಂದರೆ ಸರಿಯಲ್ಲ. ಪ್ರತಿವಾದಿ ಸುಮಾರು 30 ವರ್ಷಗಳಿಂದ ನಿಡಿ 1 ರಲ್ಲಿ ಕಾಣುವ ಸ್ಥಳದಲ್ಲಿ ಅನುಭವದಲ್ಲಿದ್ದಾರೆಂದರೆ ಸರಿಯಲ್ಲ.

7. ದಿಃ 24.02.2018 ರಂದು ಅನಧಿಕೃತವಾಗಿ ಸ್ವಾದೀನದಲ್ಲಿರುವ ವಿಸ್ತೀರ್ಣಕ್ಕೆ ಕರ್ನಾಟಕ ಸರ್ಕಾರ ಗೆಜೆಟ್ ನೋಟಿಫಿಕೇಷನ್ ಮಾಡಿರುತ್ತದೆ ಎಂದರೆ ಸರಿಯಲ್ಲ. ದಿಃ 24.02.2018 ರಂದು ಹೊರಡಿಸಿದ ಗೆಜೆಟ್ ನೋಟಿಫಿಕೇಷನ್ ಅಂತೆ ಕಾಕನೂರು ಗ್ರಾಮ ಪಂಚಾಯಿತಿಯವರು ಅನಧಿಕೃತ ಸ್ವಾದೀನದಲ್ಲಿರುವವರ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಕಾಕನೂರು ಗ್ರಾಮ ಪಂಚಾಯಿತಿಯ ವರದಿಯ ಅನ್ವಯ ದಿಃ 24.02.2018 ರ ಗೆಜೆಟ್ ನೋಟಿಫಿಕೇಷನ್ ಗೆ 44 ಜನ ಫಲಾನುಭವಿಗಳ ಪಟ್ಟಿಯನ್ನು ಶಿಫಾರಸ್ಸು ಮಾಡಲಾಗಿತ್ತು ಎಂದರೆ ಸರಿಯಲ್ಲ.

8. ಸರ್ವೆ ನಂ. 77 ರಲ್ಲಿ ಒಟ್ಟು 24 ಎಕರೆ 37 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರಸ್ತುತ ಸದರಿ ಸ್ಥಳ ಊರಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 77ರಲ್ಲಿ ನಾನು ಸ್ವಾದೀನ ಅನುಭದಲ್ಲಿರುತ್ತೇನೆಂದು ಕಾಕನೂರು ಗ್ರಾಮ ಪಂಚಾಯಿತಿಯವರು ಸರ್ಕಾರಕ್ಕೆ ದಿಃ 24.02.2018 ರಂದು ಗೆಜೆಟ್ ನೋಟಿಫಿಕೇಷನ್ ನಂತೆ ಯಾವುದೇ ಶಿಫಾರಸ್ಸನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಎಷ್ಟು ವಿಸ್ತೀರ್ಣಕ್ಕೆ ಶಿಫಾರಸ್ಸು ಮಾಡಿರುತ್ತಾರೆ ಎಂಬ ದಾಖಲೆ ಮನೆಯಲ್ಲಿದೆ. ಪ್ರತಿವಾದಿ ಶೆಡ್ ನ್ನು ನಿರ್ಮಾಣ ಮಾಡಿರುವ ಸ್ಥಳ ಸರ್ವೆ ನಂ. 77 ರಲ್ಲಿ ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.